# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| | | |
|---|---|---|
| ಭಾಗ – ೪ಎ<br>Part – IVA | ಬೆಂಗಳೂರು, ಶುಕ್ರವಾರ, ೧೨ ಸೆಪ್ಟೆಂಬರ್, ೨೦೨೫ (ಭಾದ್ರಪದ ೨೧, ಶಕವರ್ಷ ೧೯೪೭)<br>BENGALURU, FRIDAY, 12 SEPTEMBER, 2025 (BHADRAPADA 21, SHAKAVARSHA 1947) | ನಂ. ೫೮೯<br>No.589 |


**<u>ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ</u>**

**<u>ಅಧಿಸೂಚನೆ</u>**

**<u>ಸಂಖ್ಯೆ: ಸಂವ್ಯಶಾಇ 62 ಶಾಸನ 2025, ಬೆಂಗಳೂರು, ದಿನಾಂಕ: 12.09.2025</u>**

ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ (ತಿದ್ದುಪಡಿ) ವಿಧೇಯಕ, 2025 ಇದಕ್ಕೆ 2025 ರ ಸಪ್ಟೆಂಬರ್ ತಿಂಗಳ 11ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2025 ರ ಕರ್ನಾಟಕ ಅಧಿನಿಯಮ ಸಂಖ್ಯೆ: 68 ಎಂಬುದಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ IV A) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

## 2025 ರ ಕರ್ನಾಟಕ ಅಧಿನಿಯಮ ಸಂಖ್ಯೆ: 68

(2025ರ ಸಪ್ಟೆಂಬರ್ ತಿಂಗಳ 12ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ (ತಿದ್ದುಪಡಿ) ಅಧಿನಿಯಮ, 2025

(2025ರ ಸಪ್ಟೆಂಬರ್ ತಿಂಗಳ 11ನೇ ದಿನಾಂಕದಂದು ರಾಜ್ಯ ಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ ಅಧಿನಿಯಮ, 2023 (2023ರ ಕರ್ನಾಟಕ ಅಧಿನಿಯಮ 28)ನ್ನು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ ಅಧಿನಿಯಮ, 2023 (2023ರ ಕರ್ನಾಟಕ ಅಧಿನಿಯಮ 28)ನ್ನು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಸರ್ಕಾರಿ ರಾಜ್ಯಪತ್ರದಲ್ಲಿ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಹೊಸ ಅಧ್ಯಾಯ IV-ಎ ಸೇರ್ಪಡೆ.-** ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ ಅಧಿನಿಯಮ, 2023 (2023ರ ಕರ್ನಾಟಕ ಅಧಿನಿಯಮ ಸಂಖ್ಯೆ: 28)ರ ಅಧ್ಯಾಯ IVರ ತರುವಾಯ ಈ ಮುಂದಿನ ಹೊಸ ಅಧ್ಯಾಯವನ್ನು ಸೇರಿಸತಕ್ಕದ್ದು, ಎಂದರೆ:-

**"ಅಧ್ಯಾಯ IV-ಎ**
**ನ್ಯಾಯಲಯದ ಆದೇಶಗಳ ಅನುಪಾಲನೆ**

**28-A. ಗೊತ್ತುಪಡಿಸಿದ ಅಧಿಕಾರಿ.-** ಸರ್ಕಾರವು ಅಧಿಸೂಚನೆಯ ಮೂಲಕ ನ್ಯಾಯಾಲಯವು ಹೊರಡಿದ ಯಾವುದೇ ಆದೇಶದ ಜಾರಿ ಅಥವಾ ಅನುಪಾಲನೆಯ ಮೇಲ್ವಿಚಾರಣೆ ಮಾಡಲು ಒಬ್ಬ ಅಧಿಕಾರಿಯನ್ನು ಗೊತ್ತುಪಡಿಸಿದ ಅಧಿಕಾರಿಯನ್ನಾಗಿ ನೇಮಿಸತಕ್ಕದ್ದು.

**28-B. ನ್ಯಾಯಾಲಯ ಆದೇಶದ ಅನನುಪಾಲನೆ.-** (1) ಪ್ರತಿಯೊಂದು ಇಲಾಖೆಯು ಗೊತ್ತುಪಡಿಸಿದ ಅಧಿಕಾರಿಯ ನೆರವಿನೊಂದಿಗೆ ನಿರ್ದಿಷ್ಟಪಡಿಸಿದ ಸಮಯದೊಳಗಾಗಿ ಅನುಪಾಲನೆ ಮಾಡದಿರುವ ಮತ್ತು ಅಂಥ ಅವಧಿಯೊಳಗೆ ಅನುಪಾಲನೆ ಮಾಡಿರುವ ಆದೇಶಗಳ ಸಂಖ್ಯೆಯನ್ನು ಒಳಗೊಂಡ ಪಾಕ್ಷಿಕ (ಹದಿನೈದು ದಿನಗಳ) ವರದಿಯನ್ನು ಸಿದ್ಧಪಡಿಸತಕ್ಕದ್ದು.

(2) ಆದೇಶಗಳ ಅನನುಪಾಲನೆಗಾಗಿ, ಇಲಾಖೆಯ ಮುಖ್ಯಸ್ಥರ ಮುಂದೆ ಮಂಡಿಸಬೇಕಾದ ಪ್ರತಿಯೊಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಅನುಪಾಲನೆಯ ಮುಂದಿನ ಪ್ರಕ್ರಿಯೆಗೊಳಿಸುವ ಕುರಿತಾದ ಕಾರಣಗಳನ್ನು ನೀಡತಕ್ಕದ್ದು."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

**PARLIAMENTARY AFFAIRS AND LEGISLATION SECRETARIAT**
**NOTIFICATION**
**NO.DPAL 62 SHASHANA 2025, BENGALURU, DATED:12.09.2025**

ಭಾರತ ಸಂವಿಧಾನದ ಅನುಚ್ಛೇಧ 348ರ ಖಂಡ (3)ರ ಅಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ (ತಿದ್ದುಪಡಿ) ಅಧಿನಿಯಮ, 2025 (2025 ರ ಕರ್ನಾಟಕ ಅಧಿನಿಯಮ ಸಂಖ್ಯೆ: 68) ರ ಭಾಷಾಂತರವನ್ನು ಅಧಿಕೃತ ಆಂಗ್ಲ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ IV A) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

**KARNATAKA ACT NO. 68 OF 2025**

(First Published in the Karnataka Gazette Extra-ordinary on the 12th day of September, 2025)

# THE KARNATAKA CONDUCT OF GOVERNMENT LITIGATION (AMENDMENT) ACT, 2025

(Received the assent of the Governor on the 11th day of September, 2025)

An Act to amend the Karnataka Conduct of Government Litigation Act, 2023 (Karnataka Act 28 of 2023).

Whereas it is expedient to amend the Karnataka Conduct of Government Litigation Act, 2023 (Karnataka Act 28 of 2023) for the purposes hereinafter appearing;

Be it enacted by the Karnataka State legislature in the seventy sixth Year of the Republic of India as follows:-

**1. Short title and commencement.-** (1) This Act may be called the Karnataka Conduct of Government Litigation (Amendment) Act , 2025.

(2) It shall come into force on such date as the State Government may, by notification in the Official Gazette appoint.

**2. Insertion of new chapter IV-A.-** In the Karnataka Conduct of Government Litigation Act, 2023 (Karnataka Act 28 of 2023) after Chapter IV, the following new Chapter shall be inserted, namely:-

**“CHAPTER-IV-A**

**COMPLIANCE OF COURT ORDERS**

**28-A. Designated Officer.-** The Government shall by notification appoint an officer as designated officer, who shall supervise the enforcement or compliance of any order issued by the Court of law.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**28-B. Non-Compliance of Court Order.-** (1) Every Department with the assistance of the designated officer shall prepare a fortnightly report containing number of orders which are not complied within specified period and those orders which are complied with within such period.

(2) For non-compliance of the orders, the reasons shall be assigned in respect of each case to be placed before the head of the Department for further processing towards the compliance."

The above translation of ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ (ತಿದ್ದುಪಡಿ) ಅಧಿನಿಯಮ, 2025 (2025ರ ಕರ್ನಾಟಕ ಅಧಿನಿಯಮ ಸಂಖ್ಯೆ: 68) be published in the official Gazette under clause (3) of Article 348 of the constitution of India.

**THAAWARCHAND GEHLOT**
**GOVERNOR OF KARANATAKA**

By Order and in the name of
the Governor of Karnataka,

**G. SRIDHAR**
Secretary to Government
Department of Parliamentary
Affairs and Legislation

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH